ನಾಗರಾಜವಿರಚಿತಂ

# ಶತಾಲಂಕಾರಕೃಷ್ಣಶತಕಮ್

**ದೃಷ್ಟಾನ್ ಕುವಲಯಾನಂದೇ ಯೋಜಯಿತ್ವಾ ಯಥಾಮತಿ ।**
**ರಮ್ಯಾನ್ ಶತಮಲಂಕಾರಾನ್ ಕೃಷ್ಣಸ್ತುತಿರಿಯಂ ಕೃತಾ ॥**

ಕುವಲಯಾನಂದ ಎಂಬ ಗ್ರಂಥದಲ್ಲಿ ಕಂಡುಬರುವ ನೂರು ಸುಂದರವಾದ ಅಲಂಕಾರಗಳನ್ನು ನನ್ನ ಬುದ್ಧಿಗೆ ತೋರಿದಂತೆ ಆರಿಸಿಕೊಂಡು ಆ ಅಲಂಕಾರಗಳು ಒಂದೊಂದು ಪದ್ಯದಲ್ಲಿ ಬರುವಂತೆ ಈ ಕೃಷ್ಣಸ್ತುತಿಯನ್ನು ರಚಿಸಲಾಗಿದೆ.

**ಪ್ರಬಂಧಂ ನಾಗರಾಜೇನ ಕೃತಮೇನಂ ವಿಪಶ್ಚಿತಃ ।**
**ಗುಣಗೃಹ್ಯಾಃ ಕೃಪಾಪೂರ್ಣಾಃ ಸ್ವೀಕುರ್ವಂತು ಸದಾ ಮುದಾ ॥**

ನಾಗರಾಜನೆಂಬ ನಾನು ರಚಿಸಿರುವ ಈ ಪ್ರಬಂಧವನ್ನು ಗುಣಪಕ್ಷಪಾತಿಗಳೂ ಕರುಣೆಯಿಂದ ಸದಾ ತುಂಬಿದವರೂ ಆದ ವಿದ್ವಾಂಸರು ಸಂತೋಷದಿಂದ ಸ್ವೀಕರಿಸಲಿ.

## 1. ಉಪಮಾಲಂಕಾರ

**ಕೃಷ್ಣ ತ್ವಮಸ್ಯದ್ರಿರಿವಾಪ್ರಕಂಪ್ಯಃ ಕೀರ್ತಿಸ್ತ್ವದೀಯಾ ಕುಮುದೇಶಗೌರೀ।**
**ಸೂರ್ಯಾಯತೇ ತೇ ಜ್ವಲಿತಃ ಪ್ರತಾಪಃ ಸಮುದ್ರವದ್ರತ್ನನಿಧಿಸ್ತ್ವಮಾಸ್ಸೇ ॥**

**ಅನುವಾದ:** ಕೃಷ್ಣ, ನೀನು ಬೆಟ್ಟದಂತೆ ಅಕಂಪ್ಯನು. ನಿನ್ನ ಕೀರ್ತಿಯು ಚಂದ್ರನಂತೆ ಬಿಳುಪಾಗಿದೆ. ಉಜ್ಜ್ವಲವಾದ ನಿನ್ನ ಪ್ರತಾಪವು ಸೂರ್ಯನಂತೆ ಹೊಳೆಯುತ್ತಿದೆ. ಸಮುದ್ರದಂತೆ ನೀನು ರತ್ನಗಳ ನಿಧಿಯಾಗಿರುವೆ.

**ವಿವರಣೆ:** ಕಾವ್ಯಕ್ಕೆ ಸೌಂದರ್ಯವನ್ನು ತರುವ ಅಂಶಗಳು ಅಲಂಕಾರಗಳು. ಅವು ಶಬ್ದಾಲಂಕಾರಗಳು, ಅರ್ಥಾಲಂಕಾರಗಳು ಎಂದು ಎರಡು ವಿಧ. ಕಿವಿಗೆ ಇಂಪಾಗಿ ಶಬ್ದಗಳನ್ನು ಕಾವ್ಯದಲ್ಲಿ ಜೋಡಿಸಿದರೆ ಅವು ಶಬ್ದಾಲಂಕಾರಗಳು. ಚಮತ್ಕಾರವನ್ನು ಉಂಟುಮಾಡುವ ಅರ್ಥವನ್ನು ಕವಿ ಹೇಳಿದರೆ ಅವು ಅರ್ಥಾಲಂಕಾರಗಳು. ಅಪ್ಪಯ್ಯ ದೀಕ್ಷಿತರು ಬರೆದಿರುವ 'ಕುವಲಯಾನಂದ' ಎಂಬ ಗ್ರಂಥದಲ್ಲಿ ನೂರು ಅರ್ಥಾಲಂಕಾರಗಳನ್ನು ಲಕ್ಷಣ – ಲಕ್ಷ್ಯಪೂರ್ವಕವಾಗಿ ವಿವರಿಸಲಾಗಿದೆ. ಅಲ್ಲಿ ಒಂದೊಂದು ಅಲಂಕಾರದ ಹಲವು ಭೇದಗಳನ್ನು ಹೇಳಿದ್ದಾರೆ. ಪ್ರಸ್ತುತ ಕೃಷ್ಣಶತಕದಲ್ಲಿ ಅವುಗಳಲ್ಲಿ ಮುಖ್ಯ ಎನಿಸಿದ ನೂರು ಅಲಂಕಾರಗಳನ್ನು ಆರಿಸಿಕೊಂಡು ಅವುಗಳಿಗೆ ಕೃಷ್ಣಸ್ತುತಿರೂಪವಾದ ಪದ್ಯಗಳನ್ನು ಸಂಸ್ಕೃತದಲ್ಲಿ ರಚಿಸಿದ್ದೇನೆ. ಪ್ರಧಾನವಾದದ್ದು ಕೃಷ್ಣನ ಸ್ತೋತ್ರ. ಆನುಷಂಗಿಕವಾಗಿ ಅಲಂಕಾರಗಳ ಬೋಧನೆ ಇಲ್ಲಿದೆ.

ಅಲಂಕಾರಗಳಲ್ಲಿ ಉಪಮೆಯೇ ಮೊದಲನೆಯದು. ಹಲವಾರು ಅಲಂಕಾರಗಳು ಉಪಮೆಯ ಭೇದಗಳೇ. ಆದರೂ ಅವುಗಳನ್ನು ಸ್ವತಂತ್ರ ಅಲಂಕಾರಗಳೆಂದು ಪರಿಗಣಿಸಿದ್ದಾರೆ. ಕೃಷ್ಣ ತ್ವಮಸ್ಯದ್ರಿರಿವಾಪ್ರಕಮ್ಪ್ಯಃ ಎಂಬ ಉದಾಹರಣೆಯಲ್ಲಿ ಇವ ಶಬ್ದವನ್ನು ಬಳಸಲಾಗಿದೆ. ಕೃಷ್ಣನು ಉಪಮೇಯ, ಅದ್ರಿ (= ಬೆಟ್ಟ) ಉಪಮಾನ, ಇವ ಎಂಬುದು ಉಪಮಾವಾಚಕ ಶಬ್ದ, ಅಪ್ರಕಂಪ್ಯತ್ವ ಸಾಧಾರಣಧರ್ಮ. ಈ ನಾಲ್ಕು ಅಂಶಗಳೂ ವಾಚ್ಯವಾಗಿದ್ದಾಗ ಪೂರ್ಣೋಪಮಾ ಎನ್ನುತ್ತೇವೆ. ಇವ ಶಬ್ದವು ಉಪಮೆಯ, ಎಂದರೆ ಸಾದೃಶ್ಯದ ವಾಚಕವಾಗಿದ್ದಾಗ ಉಪಮೆ ವಾಕ್ಯಗಾ.

ಕೀರ್ತಿಸ್ತ್ವದೀಯಾ ಕುಮುದೇಶಗೌರೀ ಎಂಬ ಎರಡನೆಯ ಉದಾಹರಣೆಯಲ್ಲಿ ಕುಮುದೇಶ ಎಂದರೆ ಚಂದ್ರ. ಚಂದ್ರನು ಹುಟ್ಟಿದಾಗ ಕುಮುದ ಪುಷ್ಪಗಳು ಅರಳುವುದರಿಂದ ಚಂದ್ರನಿಗೆ ಈ ಹೆಸರು. ಕುಮುದೇಶ ಇವ ಗೌರೀ ಕುಮುದೇಶಗೌರೀ ಎಂದು ಸಮಾಸದ ವಿಗ್ರಹ. 'ಉಪಮಾನಾನಿ ಸಾಮಾನ್ಯವಚನೈಃ' ಎಂಬ ಪಾಣಿನಿಸೂತ್ರದಿಂದ ಸಮಾಸ. ಇಲ್ಲಿ ಕೀರ್ತಿ ಉಪಮೇಯ, ಚಂದ್ರ ಉಪಮಾನ, ಗೌರತ್ವ (= ಬಿಳಿಯ ಬಣ್ಣ) ಸಮಾನಧರ್ಮ. ಸಾದೃಶ್ಯವಾಚಕಶಬ್ದ ಇಲ್ಲದುದರಿಂದ ಲುಪ್ತೋಪಮೆ. 'ಲುಪ್ತಾವಯವಾ ಉಪಮಾ ಲುಪ್ತೋಪಮಾ'. ಇಲ್ಲಿ ಸಮಾಸದಿಂದ ಉಪಮೆ ಸಿದ್ಧವಾಗುವುದರಿಂದ ಇದನ್ನು ಸಮಾಸಗಾ ಎನ್ನುತ್ತಾರೆ.

ಸೂರ್ಯಾಯತೇ ತೇ ಜ್ವಲಿತಃ ಪ್ರತಾಪಃ ಎಂಬ ಉದಾಹರಣೆಯಲ್ಲಿ ಪ್ರತಾಪ ಉಪಮೇಯ, ಸೂರ್ಯ ಉಪಮಾನ, ಜ್ವಲಿತತ್ವ ಸಾಧಾರಣ ಧರ್ಮ, ಕ್ಯಙ್ ಪ್ರತ್ಯಯವು ಸಾದೃಶ್ಯವಾಚಕ. ಸೂರ್ಯ ಇವ ಆಚರತಿ ಸೂರ್ಯಾಯತೇ ಎಂದು ವಿಗ್ರಹ. ಪ್ರತ್ಯಯದಿಂದ ಉಪಮೆಯು ವಾಚ್ಯವಾದುದರಿಂದ ಪ್ರತ್ಯಯಗಾ ಉಪಮಾ. ಕರ್ತುಃ ಕ್ಯಙ್ ಸಲೋಪಶ್ಚ ಎಂಬ ಸೂತ್ರದಿಂದ ಕ್ಯಙ್ ಪ್ರತ್ಯಯವು ವಿಹಿತವಾಗಿದೆ.

'ಸಮುದ್ರವದ್ ರತ್ನನಿಧಿಸ್ತ್ವಮಾಸ್ಸೇ' ಎಂಬಲ್ಲಿ ಕೃಷ್ಣ ಉಪಮೇಯ, ಸಮುದ್ರ ಉಪಮಾನ, ರತ್ನನಿಧಿತ್ವ ಸಾಧಾರಣಧರ್ಮ, ವತಿ ಪ್ರತ್ಯಯವು ಸಾದೃಶ್ಯವಾಚಕ. ತೇನ ತುಲ್ಯಂ ಕ್ರಿಯಾಚೇದ್ವತಿಃ ಎಂಬ ಸೂತ್ರದಿಂದ ವತಿ ಪ್ರತ್ಯಯ. ಆಸ್ಸೇ ಎಂಬುದು ಆಸ ಉಪವೇಶನೇ ಎಂಬ ಧಾತುವಿನ ಲಟ್ (ವರ್ತಮಾನಕಾಲ) ಲಕಾರದಲ್ಲಿ ಮಧ್ಯಮ ಪುರುಷೈಕವಚನದ ರೂಪ.

'ಉಪಮಾ ಯತ್ರ ಸಾದೃಶ್ಯಲಕ್ಷ್ಮೀರುಲ್ಲಸತಿ ದ್ವಯೋಃ' ಉಪಮಾನೋಪಮೇಯಗಳಿಗೆ ಹೇಳಿರುವ ಸುಂದರ ಸಾದೃಶ್ಯ ಅಥವಾ ಸಾಧರ್ಮ್ಯವೇ ಉಪಮೆ ಎಂದು ಅಪ್ಪಯ್ಯದೀಕ್ಷಿತರು ಉಪಮಾಲಕ್ಷಣವನ್ನು ಹೇಳಿದ್ದಾರೆ.

## 2. ಅನನ್ವಯಾಲಂಕಾರ

**ಸಹಸ್ರಶಃ ಸಂತು ದೇವಾಃ ಕೃಷ್ಣಃ ಕೃಷ್ಣ ಇವೋಜ್ಜ್ವಲಃ ।**
**ಅಸಂಖ್ಯಾಃ ಸಂತು ಮಣಯಃ ಕೌಸ್ತುಭಃ ಕೌಸ್ತುಭೋ ಯಥಾ ॥**

**ಅನುವಾದ** : ದೇವತೆಗಳು ಸಾವಿರಾರು ಸಂಖ್ಯೆಯಲ್ಲಿದ್ದರೂ ಕೃಷ್ಣನು ಕೃಷ್ಣನಂತೆ ಹೊಳೆಯುತ್ತಾನೆ. ಲೆಕ್ಕವಿಲ್ಲದಷ್ಟು ರತ್ನಗಳು (ಲೋಕದಲ್ಲಿ) ಇದ್ದರೂ ಕೌಸ್ತುಭರತ್ನಕ್ಕೆ ಕೌಸ್ತುಭರತ್ನವೇ ಸಾಟಿ.

**ವಿವರಣೆ** : ಸಾದೃಶ್ಯವು ಸಂಪನ್ನವಾಗಬೇಕಾದರೆ ಉಪಮಾನ – ಉಪಮೇಯ ಎಂಬ ಎರಡು ಪದಾರ್ಥಗಳಿರಬೇಕು. ತದ್ಭಿನ್ನತ್ವೇ ಸತಿ ತದ್ಗತಭೂಯೋಧರ್ಮವತ್ತ್ವಂ ಸಾದೃಶ್ಯಮ್ ಎಂದು ನೈಯಾಯಿಕರು ಲಕ್ಷಿಸಿದ್ದಾರೆ. ಪ್ರಸ್ತುತ ಶ್ಲೋಕದ ಪ್ರಥಮಾರ್ಧದಲ್ಲಿ ಕೃಷ್ಣನೇ ಉಪಮೇಯವೂ ಉಪಮಾನವೂ ಆಗಿದ್ದಾನೆ. ಉತ್ತರಾರ್ಧದಲ್ಲಿ ಕೌಸ್ತುಭವೇ ಎರಡೂ ಆಗಿದೆ. ಆದ್ದರಿಂದ ಇಲ್ಲಿ ಶಾಸ್ತ್ರೀಯ ಅನ್ವಯ ಆಗುವುದಿಲ್ಲ ಎಂದು ಅನನ್ವಯಾಲಂಕಾರ. ನ ವಿದ್ಯತೇ ಅನ್ವಯಃ ಯಸ್ಮಿನ್ ಸಃ ಅನನ್ವಯಃ ಎಂದು ವಿಗ್ರಹ. ಅನ್ವಯವೇ ಆಗದಿರುವುದನ್ನು ಏಕೆ ಹೇಳಬೇಕು? ದ್ವಿತೀಯಸದೃಶವ್ಯವಚ್ಛೇದಾರ್ಥಮ್. ಒಂದು ವಸ್ತುವಿಗೆ ಅದರೊಡನೆಯೇ ಸಾದೃಶ್ಯವನ್ನು ಹೇಳಿದರೆ ಅದರೊಡನೆ ಹೋಲಿಸಲಾಗುವ ಇನ್ನೊಂದು ವಸ್ತು ಜಗತ್ತಿನಲ್ಲಿಲ್ಲ ಎಂದು ಧ್ವನಿತವಾಗುತ್ತದೆ. ಈ ವ್ಯಂಗ್ಯಾರ್ಥವೇ ಅನನ್ವಯಾಲಂಕಾರದ ಚಮತ್ಕಾರಕ್ಕೆ ಕಾರಣ.

ಈ ಪದ್ಯದಲ್ಲಿ ಎರಡು ಸ್ವತಂತ್ರವಾಕ್ಯಗಳಿದ್ದು ಅವುಗಳಲ್ಲಿರುವ ದೇವಾ ಎಂಬುದಕ್ಕೂ ಮಣಯ ಎಂಬುದಕ್ಕೂ ಕೃಷ್ಣ– ಕೌಸ್ತುಭಗಳಿಗೂ ಬಿಂಬಪ್ರತಿಬಿಂಬಭಾವ ಇರುವುದರಿಂದ ದೃಷ್ಟಾಂತಾಲಂಕಾರವೂ ಇದೆ. ಅನನ್ವಯ – ದೃಷ್ಟಾಂತಗಳ ಸಂಸೃಷ್ಟಿ ಇಲ್ಲಿದೆಯೆಂದು ಹೇಳಬಹುದು. ದೃಷ್ಟಾಂತಾಲಂಕಾರದ ಲಕ್ಷಣ –ಚೇದ್ ಬಿಂಬಪ್ರತಿಬಿಂಬತ್ವಂ ದೃಷ್ಟಾಂತಸ್ತದಲಂಕೃತಿಃ. ಇದನ್ನು ಮುಂದೆ ವಿವರಿಸಲಾಗುವುದು. ಅನನ್ವಯಾಲಂಕಾರದ ಲಕ್ಷಣವನ್ನು ಕುವಲಯಾನಂದದಲ್ಲಿ 'ಉಪಮಾನೋಪಮೇಯತ್ವಂ ಯದೇಕಸ್ಯೈವ ವಸ್ತುನಃ ತದನನ್ವಯಃ' ಎಂದು ಹೇಳಲಾಗಿದೆ.

## 3.ಉಪಮೇಯೋಪಮಾಲಂಕಾರಃ

**ಕೃಷ್ಣ ತ್ವದೀಯಾ ಧಿಷಣೇವ ಕೀರ್ತಿಃ ಸುನಿರ್ಮಲಾ ಭಾತಿ ಮನೋ ಹರಂತೀ ।**
**ವಿಭಾತಿ ಭೂಯೋ ಧಿಷಣಾ ಸ್ಫುರಂತೀ ಜಗತ್ತ್ರಯೇ ಕೀರ್ತಿರಿವ ತ್ವದೀಯಾ ॥ 1**

**ಅನುವಾದ** : ಕೃಷ್ಣನೇ, ಸುನಿರ್ಮಲವಾದ ನಿನ್ನ ಕೀರ್ತಿಯು ನಮ್ಮ ಮನಸ್ಸನ್ನು ಸೆಳೆಯುತ್ತಾ ನಿನ್ನ ಬುದ್ಧಿಯಂತೆ ಹೊಳೆಯುತ್ತಿದೆ. ಮತ್ತೆ ಮೂರು ಲೋಕಗಳಲ್ಲಿ ಕಂಗೊಳಿಸುವ ನಿನ್ನ ಬುದ್ಧಿಯು ನಿನ್ನ ಕೀರ್ತಿಯಂತೆ ಬೆಳಗುತ್ತಿದೆ.

ವಿವರಣೆ: ಮೊದಲನೆಯ ವಾಕ್ಯದಲ್ಲಿ ಉಪಮಾನವಾದುದು ಎರಡನೆಯ ವಾಕ್ಯದಲ್ಲಿ ಉಪಮೇಯವೂ, ಉಪಮೇಯವಾದುದು ಉಪಮಾನವೂ ಆದರೆ ಉಪಮೇಯೋಪಮಾಲಂಕಾರ.

ಕೀರ್ತಿ – ಧಿಷಣೆಗಳಿಗೆ ಸಾದೃಶ್ಯವನ್ನು ಹೇಳಿದರೆ ಧಿಷಣಾ– ಕೀರ್ತಿಗಳಿಗೂ ಸಾದೃಶ್ಯವು ಅರ್ಥಾತ್ ಸಿದ್ಧವಾಗುತ್ತದೆ. ಆದರೂ ಅದನ್ನು ಮತ್ತೆ ಹೇಳುವುದಕ್ಕೆ ಪ್ರಯೋಜನವೇನೆಂದರೆ ತೃತೀಯಸದೃಶವ್ಯವಚ್ಛೇದ. ಇವೆರಡನ್ನು ಪರಸ್ಪರ ಹೋಲಿಸಬಹುದು. ಇವೆರಡಕ್ಕೆ ಸದೃಶವಾದ ಮೂರನೆಯ ವಸ್ತು ಇಲ್ಲ ಎಂದು ವ್ಯಂಗ್ಯಾರ್ಥ. 'ಪರ್ಯಾಯೇಣ ದ್ವಯೋಸ್ತಚ್ಚೇದುಪಮೇಯೋಪಮಾ ಮತಾ' ಎಂದು ಈ ಅಲಂಕಾರದ ಲಕ್ಷಣ.

## 4. ಪ್ರತೀಪಾಲಂಕಾರ

ಕೃಷ್ಣ ತ್ವದಂಘ್ರಿನಖವನ್ಮಣಯೋ ಲಸಂತಿ
ತ್ವತ್ಪಾಣಿವತ್ ಪ್ರವಿಲಸಂತಿ ಚ ಪಲ್ಲವಾನಿ ।
ವಾಣೀವ ತೇ ನಿಗಮವಾಕ್ಯತತಿಃ ಪವಿತ್ರಾ
ತ್ವದ್ಗೇಹವದ್ವಿಜಯತೇ ಚ ಮಹೇಂದ್ರಸೌಧಃ ॥ 2

ಅನುವಾದ : ಕೃಷ್ಣನೇ, ನಿನ್ನ ಪಾದದ ಉಗುರುಗಳಂತೆ ರತ್ನಗಳೂ, ನಿನ್ನ ಕೈಗಳಂತೆ ಚಿಗುರುಗಳೂ, ನಿನ್ನ ನುಡಿಯಂತೆ ಪವಿತ್ರವೇದವಾಕ್ಯಸಂತತಿಯೂ, ನಿನ್ನ ಮನೆಯಂತೆ ಇಂದ್ರನ ಅರಮನೆಯೂ ಶೋಭಿಸುತ್ತಿವೆ.

ವಿವರಣೆ : ಲೋಕದಲ್ಲಿ ಪ್ರಸಿದ್ಧವಾದ ಉಪಮೇಯೋಪಮಾನಸಂಬಂಧವನ್ನು ತಲೆಕೆಳಗೆ ಮಾಡಿದರೆ ಅದು ಪ್ರತೀಪಾಲಂಕಾರವಾಗುತ್ತದೆ. ಪ್ರಸಿದ್ಧ ಉಪಮಾನವನ್ನು ಉಪಮೇಯವನ್ನಾಗಿ ಮಾಡಿದರೆ ಅದರಿಂದ ಉಪಮೇಯದ ಉತ್ಕರ್ಷವು ಹೆಚ್ಚುತ್ತದೆ. ಉಗುರುಗಳು ಉಪಮೇಯ, ರತ್ನಗಳು ಉಪಮಾನ ಎಂದು ಲೋಕದಲ್ಲಿ ಪ್ರಸಿದ್ಧಿ. ಪ್ರಸ್ತುತ ಉದಾಹರಣೆಯಲ್ಲಿ ರತ್ನಗಳನ್ನು ಉಪಮೇಯವಾಗಿ ಮಾಡಿ ಕೃಷ್ಣನ ಪಾದದ ಉಗುರುಗಳನ್ನು ಉಪಮಾನವನ್ನಾಗಿ ತೋರಿಸಲಾಗಿದೆ. ಹೀಗೆ ಮುಂದಿನ ಮೂರು ವಾಕ್ಯಗಳಲ್ಲೂ ಪ್ರಸಿದ್ಧೋಪಮಾನಗಳು ಉಪಮೇಯಗಳಾಗಿವೆ. ಆದ್ದರಿಂದ ಪ್ರತೀಪಾಲಂಕಾರ.

'ಪ್ರತೀಪಮುಪಮಾನಸ್ಯೋಪಮೇಯತ್ವಪ್ರಕಲ್ಪನಮ್' ಎಂದು ಪ್ರತೀಪಾಲಂಕಾರದ ಲಕ್ಷಣವನ್ನು ಹೇಳಿದ್ದಾರೆ. ಪ್ರತಿಗಚ್ಛಂತಿ ಆಪಃ ಯತ್ರ ತತ್ ಪ್ರತೀಪಮ್. ಪ್ರತಿ + ಅಪ್ ಎಂಬ ಸ್ಥಿತಿಯಲ್ಲಿ ದ್ವ್ಯಂತರುಪಸರ್ಗೇಭ್ಯಃ ಅಪ ಈತ್ ಎಂಬ ಸೂತ್ರದಿಂದ ಅಕಾರಕ್ಕೆ ಈಕಾರಾದೇಶ, ಸವರ್ಣ ದೀರ್ಘಸಂಧಿ. ವಿಜಯತೇ ಎಂಬಲ್ಲಿ ವಿಪರಾಭ್ಯಾಂ ಜೇಃ ಎಂಬ ಸೂತ್ರದಿಂದ ಆತ್ಮನೇಪದ.

## 5. ರೂಪಕಾಲಂಕಾರ

ತವ ವದನಂ ದ್ವಿಜರಾಜಸ್ತವ ನಯನೇ ಕುವಲಯೇ ಭೀಷ್ಮನೃಪತನಯೇ।
ತವ ವಚನಂ ಪೀಯೂಷಂ ಲಸತಿತಮಾಮಿತಿ ವದನ್ ಹರಿರ್ಜಯತಿ ॥ 3

**ಅನುವಾದ** : 'ಭೀಷ್ಮನೆಂಬ ರಾಜನ ಮಗಳಾದ ರುಕ್ಮಿಣಿಯೇ, ನಿನ್ನ ಮುಖವೇ ಚಂದ್ರ, ನಿನ್ನ ಕಣ್ಣುಗಳೇ ನೈದಿಲೆಗಳು, ನಿನ್ನ ಮಾತೇ ಅಮೃತ' ಎಂದು ಹೇಳುವ ಕೃಷ್ಣನು ಜಯಶಾಲಿ.

**ವಿವರಣೆ**: ಉಪಮಾನೋಪಮೇಯಗಳಿಗೆ ಹೇಳುವ ಅಭೇದವನ್ನು ರೂಪಕಾಲಂಕಾರ ಎನ್ನುತ್ತಾರೆ. 'ತದ್ರೂಪಕಮಭೇದೋ ಯ ಉಪಮಾನೋಪಮೇಯಯೋಃ'. ಇಲ್ಲಿ ಮುಖ-ಚಂದ್ರರಿಗೂ, ಕಣ್ಣು-ನೈದಿಲೆಗಳಿಗೂ, ಮಾತು-ಅಮೃತಗಳಿಗೂ ಅಭೇದವನ್ನು ಹೇಳಿರುವುದರಿಂದ ರೂಪಕಾಲಂಕಾರ. ಅಪ್ಪಯ್ಯದೀಕ್ಷಿತರು 'ವಿಷಯ್ಯಭೇದತಾದ್ರೂಪ್ಯರಂಜನಂ ವಿಷಯಸ್ಯ ಯತ್ ತದ್ರೂಪಕಮ್' ಎಂದು ಲಕ್ಷಣವನ್ನು ಹೇಳಿದ್ದಾರೆ. ವಿಷಯಿ ಎಂದರೆ ಉಪಮಾನ, ವಿಷಯ ಎಂದರೆ ಉಪಮೇಯ. ಅವುಗಳಿಗೆ ಅಭೇದ ಅಥವಾ ತಾದ್ರೂಪ್ಯವನ್ನು ಹೇಳಿದರೆ ಅದು ರೂಪಕ ಎಂದು ಅಭಿಪ್ರಾಯ. ಭೇದಸಹಿಷ್ಣುಃ ಅಭೇದಃ ತಾದ್ರೂಪ್ಯಮ್ ಎಂದು ಹೇಳಲಾಗಿದೆ.

## 6. ಪರಿಣಾಮಾಲಂಕಾರ

ಶ್ರೀಕೃಷ್ಣೋ ಮುಖಪದ್ಮೇನ ಜಗದಾಹ್ಲಾದಕಾರಿಣಾ।
ಜಗಾದ ಸೂಕ್ತಿರತ್ನಾನಿ ಫಲ್ಗುಣಾಯೋಜ್ಜ್ವಲಾನಿ ಸಃ ॥ 4

**ಅನುವಾದ** : ಶ್ರೀಕೃಷ್ಣನು ಜಗತ್ತಿಗೆ ಆನಂದವನ್ನುಂಟು ಮಾಡುವ ತನ್ನ ಮುಖಪದ್ಮದಿಂದ ಅರ್ಜುನನಿಗೆ ಉಜ್ಜ್ವಲವಾದ ಸೂಕ್ತಿರತ್ನಗಳನ್ನು ಹೇಳಿದನು.

**ವಿವರಣೆ** : ಇಲ್ಲಿ ಮುಖಪದ್ಮೇನ ಎಂಬ ಪದದಲ್ಲಿ ಮುಖಮೇವ ಪದ್ಮಮ್ ಎಂದು ರೂಪಕಸಮಾಸದ ವಿಗ್ರಹವನ್ನೇ ಮಾಡಬೇಕು. ಮುಖಂ ಪದ್ಮಮಿವ ಎಂದು ಉಪಮಿತಸಮಾಸದ ವಿಗ್ರಹವನ್ನು ಮಾಡಲಾಗದು. ಏಕೆಂದರೆ ಸೂತ್ರವು 'ಉಪಮಿತಂ ವ್ಯಾಘ್ರಾದಿಭಿಃ ಸಾಮಾನ್ಯಾಪ್ರಯೋಗೇ' ಎಂದಿದೆ. ಸಾಮಾನ್ಯಧರ್ಮವನ್ನು ಹೇಳದೆ ಇದ್ದಾಗ ಮಾತ್ರ ಉಪಮಿತ ಸಮಾಸವನ್ನು ಮಾಡಬಹುದು ಎಂದು ಅದರ ತಾತ್ಪರ್ಯ. ಪ್ರಸ್ತುತ ಉದಾಹರಣೆಯಲ್ಲಿ ಜಗದಾಹ್ಲಾದಕಾರಿಣಾ ಎಂದು ಸಾಮಾನ್ಯ ಧರ್ಮವನ್ನು ಹೇಳಿರುವುದರಿಂದ ಉಪಮಿತ ಸಮಾಸಕ್ಕೆ ಅವಕಾಶವಿಲ್ಲ. ರೂಪಕಸಮಾಸವನ್ನು ಮಾಡಿದಾಗ ಉತ್ತರಪದದ ಅರ್ಥಕ್ಕೆ ಎಂದರೆ ಪದ್ಮಕ್ಕೆ ಪ್ರಾಧಾನ್ಯವು ಬರುತ್ತದೆ. ಆದರೆ ಪದ್ಮಕ್ಕೆ ಜಗಾದ ಎಂಬ ಕ್ರಿಯಾಪದದ ಅರ್ಥದೊಡನೆ ಅನ್ವಯವು ಹೊಂದುವುದಿಲ್ಲ. ಏಕೆಂದರೆ ಪದ್ಮ ಮಾತನಾಡಲಾರದು. ಅದು ಮುಖರೂಪದಿಂದ ಪರಿಣಾಮವನ್ನು ಹೊಂದಿದರೆ ಮಾತ್ರ

ಎಂಬುದರೊಡನೆ ಅನ್ವಯವನ್ನು ಹೊಂದುವುದರಿಂದ ಇಲ್ಲಿ ಸ್ವರಸವಾಗಿ ಜಗಾದ ಪರಿಣಾಮಾಲಂಕಾರ. 'ಪರಿಣಾಮಃ ಕ್ರಿಯಾರ್ಥಶ್ಚೇದ್ ವಿಷಯೀ ವಿಷಯಾತ್ಮನಾ' ಎಂದು ಪರಿಣಾಮಾಲಂಕಾರದ ಲಕ್ಷಣವನ್ನು ಹೇಳಿದ್ದಾರೆ.

## 7. ಉಲ್ಲೇಖಾಲಂಕಾರ

ಲೀಲಾಮಾನುಷವಿಗ್ರಹೋ ಹರಿರಸಾವಿತ್ಯಾಹ ಯೋಗಿವ್ರಜೋ
ಜ್ಞಾನೀ ಬ್ರಹ್ಮರಹಸ್ಯಬೋಧಕ ಇತಿ ಪ್ರಾಜ್ಞಾ ವದಂತ್ಯನ್ವಹಮ್ ।
ರಾಧಾಯಾ ಹೃದಯೇಶ್ವರೋ ವರ ಇತಿ ಪ್ರೇಮ್ಣಾ ವದಂತ್ಯಂಗನಾಃ
ಶ್ರೀಕೃಷ್ಣೋ ಭಗವಾನ್ ಜನೈರ್ಬಹುವಿಧೈರ್ಭೂಮ್ನೇಕ್ಷ್ಯತೇಽನೇಕಧಾ ॥ 5

ಅನುವಾದ: ಯೋಗಿವೃಂದವು ಕೃಷ್ಣನನ್ನು 'ಲೀಲಾಮಾನುಷವಿಗ್ರಹನಾದ ಹರಿಯೇ ಇವನು' ಎಂದು ಹೇಳುತ್ತಿದೆ. ಪ್ರಾಜ್ಞರು ಯಾವಾಗಲೂ 'ಬ್ರಹ್ಮರಹಸ್ಯಗಳನ್ನು ತಿಳಿಸುವ ಜ್ಞಾನಿಯೇ ಕೃಷ್ಣ' ಎನ್ನುತ್ತಿದ್ದಾರೆ. ಹೆಂಗಸರು ಪ್ರೀತಿಯಿಂದ ಕೃಷ್ಣನನ್ನು 'ರಾಧೆಯ ಹೃದಯೇಶ್ವರನಾದ ವರನೇ ಇವನು' ಎಂದು ಕರೆಯುತ್ತಿದ್ದಾರೆ. ಒಬ್ಬ ಕೃಷ್ಣನನ್ನೇ ಅನೇಕ ಪ್ರಕಾರದ ಜನರು ಅನೇಕ ರೀತಿಯಲ್ಲಿ ಕಾಣುತ್ತಿದ್ದಾರೆ.

ವಿವರಣೆ: ಒಂದೇ ವಸ್ತುವನ್ನು ಅನೇಕರು ಅನೇಕ ಪ್ರಕಾರವಾಗಿ ಕಂಡಂತೆ ವರ್ಣಿಸಿದರೆ ಉಲ್ಲೇಖಾಲಂಕಾರ. 'ಬಹುಭಿರ್ಬಹುಧೋಲ್ಲೇಖಾದೇಕಸ್ಯೋಲ್ಲೇಖ ಇಷ್ಯತೇ' ಎಂದು ಇದರ ಲಕ್ಷಣ. ಇಲ್ಲಿ ಒಬ್ಬ ಕೃಷ್ಣನನ್ನು ಯೋಗಿಗಳು, ಪ್ರಾಜ್ಞರು, ಸ್ತ್ರೀಯರು ಬೇರೆಬೇರೆ ರೀತಿಗಳಲ್ಲಿ ಕಂಡರು ಎಂದು ವರ್ಣಿಸಿರುವುದರಿಂದ ಉಲ್ಲೇಖಾಲಂಕಾರ.

## 8. ಸ್ಮರಣಾಲಂಕಾರಃ

ದೃಷ್ಟ್ವಾಬ್ಜಮತ್ರ ತವ ಪಾದಯುಗಂ ಸ್ಮರಾಮಿ
ಕೃಷ್ಣಾವಲೋಕ್ಯ ಜಲದಂ ತವ ಕೇಶರಾಶಿಮ್ ।
ಶ್ರುತ್ವಾ ಚ ಕೋಕಿಲರವಂ ತವ ವೇಣುನಾದಂ
ನಿತ್ಯಂ ಸ್ಮರನ್ ಪರಮಪೂರುಷ ಮೋಮುದೀಮಿ ॥ 6

ಅನುವಾದ : ಕೃಷ್ಣ, ತಾವರೆಹೂವನ್ನು ನೋಡಿ ನಿನ್ನ ಪಾದಗಳನ್ನು ನೆನಪಿಸಿ ಕೊಳ್ಳುತ್ತೇನೆ. ಮೋಡವನ್ನು ನೋಡಿ ನಿನ್ನ ಕೇಶಪಾಶವನ್ನೂ, ಕೋಗಿಲೆಯ ಇಂಚರವನ್ನು ಕೇಳಿ ನಿನ್ನ ಮುರಳೀನಾದವನ್ನೂ ಸದಾ ಸ್ಮರಿಸುತ್ತ ಆನಂದಪಡುತ್ತಿದ್ದೇನೆ.

ವಿವರಣೆ : ಸಾದೃಶ್ಯಮೂಲವಾದ ಸ್ಮರಣೆಯು ಚಮತ್ಕಾರವನ್ನುಂಟುಮಾಡುವುದರಿಂದ ಸ್ಮರಣಾಲಂಕಾರವಾಗುತ್ತದೆ. ಪದ್ಮವನ್ನು ನೋಡಿದಾಗ ಕೃಷ್ಣನ ಪಾದಗಳ, ಮೋಡವನ್ನು ನೋಡಿದಾಗ ಅವನ ಕೇಶಪಾಶದ ಮತ್ತು ಕೋಗಿಲೆಯ ಗಾನದ ಶಬ್ದವನ್ನು ಕೇಳಿದಾಗ ಅವನ ಮುರಳೀನಾದದ ಸ್ಮರಣೆ ಬರಲು ಸಾದೃಶ್ಯವೇ ಕಾರಣ. ಬೇರೆ ಯಾವುದೋ

ಕಾರಣದಿಂದ ವಸ್ತುವಿನ ನೆನಪು ಬಂದರೆ ಅದು ಸ್ಮರಣಾಲಂಕಾರದ ಉದಾಹರಣೆಯಾಗುವುದಿಲ್ಲ.

### 9. ಭ್ರಾಂತಿಮದಲಂಕಾರ

ತ್ವದ್ವಕ್ತ್ರಂ ವಿನಿರೀಕ್ಷ್ಯ ತೋಯಜಧಿಯಾ ಧಾವಂತಿ ಮತ್ತಾಲಯೋ
ರಕ್ತಂ ತೇऽಧರಮಾಕಲಯ್ಯ ಮಧುರಂ ಬಿಂಬಂ ಶುಕೋ ವೀಕ್ಷತೇ ।
ದೃಷ್ಟ್ವಾ ಕೇಶವ ಕೇಶಪಾಶಮಪಿ ತೇ ಜೀಮೂತಬುದ್ಧ್ಯಾ ಶಿಖೀ
ನೃತ್ಯತ್ಯತ್ರ ತು ನೋಚಿತಂ ತವ ಹರೇ ಲೋಕೇ ಭ್ರಮೋತ್ಪಾದನಮ್ ॥ 7

**ಅನುವಾದ** : ಕೇಶವ, ನಿನ್ನ ಮುಖವನ್ನು ನೋಡಿ ಇದೊಂದು ತಾವರೆ ಎಂಬ ಭಾವನೆಯಿಂದ ಮದಿಸಿದ ಭ್ರಮರಗಳು ಹಾರಿ ಬರುತ್ತಿವೆ. ನಿನ್ನ ಕೆಂಪು ತುಟಿಯನ್ನು ಮಾಗಿ ಸಿಹಿಯಾದ ತೊಂಡೆಹಣ್ಣೆಂದು ಭಾವಿಸಿ ಗಿಳಿಯು ದಿಟ್ಟಿಸಿ ನೋಡುತ್ತಿದೆ. ನಿನ್ನ ಕಪ್ಪು ಕೂದಲಿನ ರಾಶಿಯನ್ನು ಕಂಡು ಮೋಡವೆಂಬ ಗ್ರಹಿಕೆಯಿಂದ ನವಿಲು ಕುಣಿಯುತ್ತಿದೆ. ಹರಿಯೇ, ಹೀಗೆ ಲೋಕದಲ್ಲಿ ಭ್ರಾಂತಿಯನ್ನು ಹುಟ್ಟಿಸುವುದು ನಿನಗೆ ತರವಲ್ಲ.

**ವಿವರಣೆ** : ಸಾದೃಶ್ಯ ಮೂಲವಾದ ಭ್ರಾಂತಿಯು ಚಮತ್ಕಾರವನ್ನುಂಟುಮಾಡುವುದರಿಂದ ಭ್ರಾಂತಿಮದಲಂಕಾರವೆನಿಸುತ್ತದೆ. ಮುಖವನ್ನು ತಾವರೆಯೆಂದೂ, ತುಟಿಯನ್ನು ತೊಂಡೆಹಣ್ಣೆಂದೂ, ಕೇಶಪಾಶವನ್ನು ಮೋಡವೆಂದೂ ಭ್ರಮಿಸಲು ಕಾರಣ ಸಾದೃಶ್ಯ. ಬೇರೆ ಕಾರಣದಿಂದ ಉಂಟಾಗುವ ಭ್ರಾಂತಿಯನ್ನು ವರ್ಣಿಸಿದರೆ ಅದು ಭ್ರಾಂತಿಮದಲಂಕಾರದ ಉದಾಹರಣೆಯಾಗದು.

### 10. ಸಸಂದೇಹಾಲಂಕಾರ

ಕಿಂ ಮೇಘೋ ವಿಧೃತೇಂದ್ರಚಾಪಶಕಲಃ? ಕಿಂ ವಾ ಕುಥಾಲಂಕೃತೋ
ಹಸ್ತೀ? ದಿವ್ಯಮಣಿಪ್ರಭಾವಲಯಿತಃ ಸರ್ಪೋ ನು ದರ್ಪೋಜ್ಝಿತಃ?
ಏವಂ ಜ್ಞಾನಧನೋ ಜನೋ ವಿಹಿತವಾನ್ ಚಿಂತಾಂ ವಿಲೋಕ್ಯಾದ್ಭುತಂ
ಶ್ರೀಮತ್ ಕೃಷ್ಣಶಿರೋಜರಾಶಿಮತುಲಂ ಬರ್ಹೇಣ ಸಂಭೂಷಿತಮ್ ॥ 8

**ಅನುವಾದ**: ಶ್ರೀಕೃಷ್ಣನ ಅಪಾರಕೇಶರಾಶಿ ನವಿಲುಗರಿಯಿಂದ ಅಲಂಕೃತವಾಗಿದ್ದುದನ್ನು ಕಂಡು ಜ್ಞಾನಿಗಳು 'ಇದೇನು ಕಾಮನಬಿಲ್ಲಿನ ತುಂಡಿನಿಂದ ಶೋಭಿಸುವ ಮೇಘವೋ, ಬಣ್ಣಬಣ್ಣದ ಮೇಲ್ಹಾಸಿನಿಂದ ಅಲಂಕೃತವಾದ ಆನೆಯೋ, ದಿವ್ಯಮಣಿಯ ಕಾಂತಿಯಿಂದ ಸುತ್ತುವರಿಯಲ್ಪಟ್ಟ, ದರ್ಪವನ್ನು ತ್ಯಜಿಸಿದ ಸರ್ಪವೋ' ಎಂದು ಸಂಶಯಪಡಲಾರಂಭಿಸಿದರು.

**ವಿವರಣೆ**: ಸಾದೃಶ್ಯಮೂಲಕವಾಗಿ ಕಲ್ಪಿತವಾದ ಸಂದೇಹವು ಸಂದೇಹಾಲಂಕಾರ. ಶ್ರೀಕೃಷ್ಣನ ಕೇಶಪಾಶವು ನೈಲ್ಯವೆಂಬ ಗುಣದಿಂದ ಮೇಘಕ್ಕೂ ಆನೆಗೂ ಕೃಷ್ಣಸರ್ಪಕ್ಕೂ ಸದೃಶ. ಬರ್ಹವು (ನವಿಲಗರಿಯು) ಕಾಮನಬಿಲ್ಲಿಗೂ, ಅನೆಯ ಮೇಲೆ ಹಾಸುವ

ವಿವಿಧ ಬಣ್ಣಗಳ ಬಟ್ಟೆಗೂ, ಸರ್ಪದ ತಲೆಯ ಮೇಲೆ ಇರುವುದೆಂದು ನಂಬಲಾಗಿರುವ ಬಹುವರ್ಣಗಳನ್ನುಳ್ಳ ಮಣಿಗೂ ಸದೃಶ. ಆದ್ದರಿಂದ ಇಲ್ಲಿ ಸಂದೇಹಾಲಂಕಾರ. 'ಸ್ಯಾತ್ ಸ್ಮೃತಿಭ್ರಾಂತಿಸಂದೇಹೈಸ್ತದಂಕಾಲಂಕೃತಿತ್ರಯಮ್' ಎಂದು ಮೂರು ಅಲಂಕಾರಗಳಿಗೆ ಸಂಕ್ಷಿಪ್ತವಾಗಿ ಲಕ್ಷಣವನ್ನು ಕುವಲಯಾನಂದದಲ್ಲಿ ಹೇಳಿದ್ದಾರೆ.

## 11. ಅಪಹ್ನುತ್ಯಲಂಕಾರ

**ನಾಯಂ ಚಂದ್ರಃ ಕೀರ್ತಿರೇಷಾ ಮುರಾರೇಃ ಪಿಂಡೀಭೂತಾ ಭಾತಿ ಶೈತ್ಯಸ್ಯ ಹೇತೋಃ**
**ನೇಮಾಸ್ತಾರಾಃ ಕಿಂತು ರಾಜ್ಞಾಂ ಯಶಾಂಸಿ ಪೃಥ್ವಾದೀನಾಂ ಸ್ವಲ್ಪಕಾಯಾನಿ ಭಾಂತಿ ॥ 9**

**ಅನುವಾದ:** (ಆಕಾಶದಲ್ಲಿ ಕಾಣಿಸುತ್ತಿರುವ) ಇವನು ಚಂದ್ರನಲ್ಲ, ಇದು ಕೃಷ್ಣನ ಕೀರ್ತಿ. ಅಲ್ಲಿ ಚಳಿಯಿಂದ ಮುದ್ದೆಯಾಗಿದೆ ಅಷ್ಟೇ. (ದೂರದಲ್ಲಿ ಕಾಣಿಸುತ್ತಿರುವುವು) ನಕ್ಷತ್ರಗಳಲ್ಲ. ಇವು ಪೃಥು ಮುಂತಾದ ಪೂರ್ವರಾಜರ ಕೀರ್ತಿಗಳು. ಇವು (ಚಿಕ್ಕವಾದುದರಿಂದ) ಸಣ್ಣ ಗಾತ್ರದಲ್ಲಿ ಮಿನುಗುತ್ತಿವೆ.

**ವಿವರಣೆ:** ಅಪಹ್ನುತಿ ಎಂದರೆ ಮುಚ್ಚಿಡುವುದು. ವಸ್ತುವಿನ ನಿಜಸ್ವರೂಪವನ್ನು ಮುಚ್ಚಿಡುವುದು ಎಂದರೆ ನಿಷೇಧಕ್ಕೆ ಒಳಪಡಿಸುವುದು. ಹಾಗೆ ನಿಜಸ್ವರೂಪವನ್ನು ನಿಷೇಧಿಸಿ, ಕಾಲ್ಪನಿಕವಾದ ಇನ್ನೊಂದು ಧರ್ಮವನ್ನು ಕವಿಯು ಆರೋಪಿಸಿದರೆ ಅಪಹ್ನುತ್ಯಲಂಕಾರವಾಗುತ್ತದೆ. ಚಂದ್ರನಲ್ಲಿ ಚಂದ್ರತ್ವವನ್ನು ನಿಷೇಧಿಸಿ, ಅಲ್ಲಿ ಕೃಷ್ಣನ ಕೀರ್ತಿ ಎಂದು ಕೀರ್ತಿತ್ವಧರ್ಮವನ್ನು ಆರೋಪಿಸಿರುವುದರಿಂದ ಇಲ್ಲಿ ಅಪಹ್ನುತಿ ಎಂಬ ಅಲಂಕಾರ. ಹಾಗೆಯೇ ತಾರೆಗಳಲ್ಲಿ ತಾರಾತ್ವವನ್ನು ನಿಷೇಧಿಸಿ ಪೃಥ್ವಾದಿರಾಜರ ಕೀರ್ತಿಗಳೇ ಅವು ಎಂದು ಕಲ್ಪನೆ ಮಾಡಲಾಗಿದೆ. 'ಶುದ್ಧಾಪಹ್ನುತಿರನ್ಯಸ್ಯಾರೋಪಾರ್ಥೋ ಧರ್ಮನಿಹ್ನವಃ' ಎಂದು ಇದರ ಲಕ್ಷಣ. ಇನ್ನೊಂದು ಉದಾಹರಣೆ –

**ನಾಯಂ ಕೃಷ್ಣೋ ವಾರಿವಾಹೋ ನೇದಂ ಪಿಂಛಂ ಹರೇರ್ಧನುಃ ।**
**ನೇಮೇ ಭಕ್ತಾಶ್ಚಾತಕಾ ವೈ ನೇದಂ ಗಾನಂ ಸುಧಾಪೃಷತ್ ॥** 10

**ಅನುವಾದ:** ಇದು ಕೃಷ್ಣನಲ್ಲ, ಮೇಘ. ಇದು ನವಿಲುಗರಿಯಲ್ಲ, ಕಾಮನಬಿಲ್ಲು. ಇವರು ಭಕ್ತರಲ್ಲ, ಚಾತಕಪಕ್ಷಿಗಳು. ಇದು (ಈಗ ಕೇಳಿಸುತ್ತಿರುವುದು) ಗಾನವಲ್ಲ, ಅಮೃತದ ಬಿಂದು.

**ವಿವರಣೆ:** ಇಲ್ಲಿ ಕೃಷ್ಣಾದಿಗಳಲ್ಲಿ ಕೃಷ್ಣತ್ವ ಮುಂತಾದ ಧರ್ಮಗಳನ್ನು ನಿಷೇಧಿಸಿ ಮೇಘತ್ವ ಮುಂತಾದ ಧರ್ಮಗಳನ್ನು ಆರೋಪಿಸಿರುವುದರಿಂದ ಅಪಹ್ನುತಿ.

## 12. ಉತ್ಪ್ರೇಕ್ಷಾಲಂಕಾರ

ಶಂಕೇ ಕೃಷ್ಣವಿಯೋಗತಪ್ತಮನಸಾಂ ಗೋಪಾಂಗನಾನಾಂ ಭೃಶಂ
ಸಂದೀಪ್ತೋ ವಿರಹಾಗ್ನಿರಿಂದುವಪುಷೋ ದಾಹಂ ವ್ಯತಾನೀತ್ ಪುರಾ ।
ಪ್ಲುಷ್ಟಾನ್ಯೇವ ತದೀಯಕಾಯಶಕಲಾನ್ಯಂಗಾರತಾಮಾಪ್ನುವನ್
ದೃಶ್ಯಂತೇ ಖಲು ಕಾಲವರ್ಣಮಲಿನಾಂಕತ್ವಂ ಚ ಲಬ್ಧ್ವಾ ಚಿರಮ್ ॥ 11

ಅನುವಾದ: ಶ್ರೀಕೃಷ್ಣನ ವಿರಹದಿಂದ ಬೆಂದ ಮನಸ್ಸುಗಳನ್ನು ಹೊಂದಿದ್ದ ಗೋಪಸ್ತ್ರೀಯರ ವಿಯೋಗದ ಬೆಂಕಿಯೇ ಚಂದ್ರನ ಶರೀರದ ಕೆಲವು ಭಾಗಗಳನ್ನು ಸುಟ್ಟು ಹಾಕಿತೆಂದು ಊಹಿಸುತ್ತೇನೆ. ಅವನ ಶರೀರದ ಕೆಲವು ಭಾಗಗಳು ಕೆಂಡಗಳಾಗಿ, ಆರಿ ಇದ್ದಿಲಾಗಿ, ಕಪ್ಪುಬಣ್ಣದ ಕಳಂಕವಾಗಿ ಈಗಲೂ ಕಾಣಿಸಿಕೊಳ್ಳುತ್ತಿವೆ.

ವಿವರಣೆ: 'ಸಂಭಾವನಾ ಸ್ಯಾದುತ್ಪ್ರೇಕ್ಷಾ' ಎಂದು ಕುವಲಯಾನಂದದಲ್ಲಿ ಅಪ್ಪಯ್ಯ ದೀಕ್ಷಿತರು ಉತ್ಪ್ರೇಕ್ಷೆಯ ಲಕ್ಷಣವನ್ನು ಹೇಳಿದ್ದಾರೆ. ಉಪಮಾನದ ಕೆಲವು ಧರ್ಮಗಳು ಉಪಮೇಯದಲ್ಲಿವೆ ಎಂಬ ನಿಮಿತ್ತದಿಂದ ಉಪಮೇಯೋಪಮಾನಗಳ ತಾದಾತ್ಮ್ಯವನ್ನು ಹೇಳುವುದು ಉತ್ಪ್ರೇಕ್ಷೆ. ಉತ್ಪ್ರೇಕ್ಷಾಲಂಕಾರದಲ್ಲಿ ಉಪಮಾನವು ಕವಿಕಲ್ಪಿತಾಂಶಗಳಿಂದ ಕೂಡಿರುತ್ತದೆ. ಉಪಮಾಲಂಕಾರದಲ್ಲಿ ಉಪಮಾನ ಲೋಕ ಸಿದ್ಧವಾಗಿರುತ್ತದೆ.

ಪ್ರಸ್ತುತೋದಾಹರಣೆಯಲ್ಲಿ ಗೋಪಸ್ತ್ರೀಯರ ವಿರಹಾಗ್ನಿಯಿಂದ ಚಂದ್ರನ ಕೆಲವು ಭಾಗಗಳು ಸುಟ್ಟು ಇದ್ದಿಲಾಗಿ ಪರಿವರ್ತನೆಯನ್ನು ಹೊಂದಿವೆ ಎಂಬುದು ಕವಿಕಲ್ಪಿತ. ಉಪಮೇಯವಾದ ಕಳಂಕ ಅಥವಾ ಮಚ್ಚೆಯಲ್ಲಿ ಕಾಲಿಮಾ (ಕಪ್ಪುಬಣ್ಣ) ಎಂಬ ಧರ್ಮವಿರುವುದನ್ನು ಆಧಾರವಾಗಿಟ್ಟುಕೊಂಡು ಈ ಕಲ್ಪನೆಯನ್ನು ಮಾಡಲಾಗಿದೆ. ಒಂದು ವಸ್ತುವನ್ನು ಇನ್ನೊಂದು ವಸ್ತುವನ್ನಾಗಿ ಉತ್ಪ್ರೇಕ್ಷಿಸಿರುವುದರಿಂದ ಇದು ವಸ್ತೂತ್ಪ್ರೇಕ್ಷೆ. ಇದನ್ನೇ ಅಪ್ಪಯ್ಯ ದೀಕ್ಷಿತರು 'ಅನ್ಯಧರ್ಮಸಂಬಂಧನಿಮಿತ್ತೇನ ಅನ್ಯಸ್ಯ ಅನ್ಯತಾದಾತ್ಮ್ಯಸಂಭಾವನಮ್ ಉತ್ಪ್ರೇಕ್ಷಾ' ಎಂದು ವಿವರಿಸಿದ್ದಾರೆ.

ಇನ್ನೊಂದು ಉದಾಹರಣೆ –

ಶೌರೇ ತ್ವದೀಯಂ ಯಶ ಏವ ಮನ್ಯೇ ಖೇ ಚಂದ್ರರೂಪೇಣ ಭೃಶಂ ವಿಭಾತಿ ।
ಆಸ್ತಿಕ್ಯನಾಸ್ತಿಕ್ಯವಿವೃದ್ಧಿಹೇತೋರ್ವೃದ್ಧಿಃ ಕ್ಷಯಶ್ಚಾಸ್ಯ ಹಿ ಚೋಭವೀತಿ ॥ 12

ಅನುವಾದ: ಎಲೈ ಶೂರನ ವಂಶದಲ್ಲಿ ಜನಿಸಿದ ಕೃಷ್ಣನೇ, ನಿನ್ನ ಕೀರ್ತಿಯೇ ಆಕಾಶದಲ್ಲಿ ಚಂದ್ರನಾಗಿ ಕಂಗೊಳಿಸುತ್ತಿದೆ ಎಂದು ಊಹಿಸುತ್ತೇನೆ. (ಜಗತ್ತಿನಲ್ಲಿ) ಆಸ್ತಿಕತೆ ಮತ್ತು ನಾಸ್ತಿಕತೆ ಆಗಾಗ ಬೆಳೆಯುವುದರಿಂದ ಆ ಚಂದ್ರನಿಗೆ ವೃದ್ಧಿಯೂ ಕ್ಷಯವೂ ಉಂಟಾಗುತ್ತಿವೆ.

ವಿವರಣೆ: ಚಂದ್ರನೂ ಸತ್ಕೀರ್ತಿಯೂ ಬೆಳ್ಳಗಿರುವುದರಿಂದ ಕೀರ್ತಿಯೇ ಚಂದ್ರನಾಗಿ ಆಕಾಶದಲ್ಲಿ ಹೊಳೆಯುತ್ತದೆ ಎಂದು ಕಲ್ಪನೆ. ಆ ಚಂದ್ರನು ಶುಕ್ಲಪಕ್ಷದಲ್ಲಿ ಬೆಳೆಯುವುದಕ್ಕೂ

ಕೃಷ್ಣಪಕ್ಷದಲ್ಲಿ ಕ್ಷಯಿಸುವುದಕ್ಕೂ ವೈಜ್ಞಾನಿಕವಾದ ಬೇರೆ ಕಾರಣಗಳಿವೆ. ಆದರೆ ಇಲ್ಲಿ ಆಸ್ತಿಕ್ಯವು ಹೆಚ್ಚಿದಾಗ ಕೃಷ್ಣನ ಕೀರ್ತಿ ಬೆಳೆಯುವುದರಿಂದ ಚಂದ್ರನು ದೊಡ್ಡದಾಗಿ ಕಾಣಿಸುತ್ತಾನೆ. ನಾಸ್ತಿಕತೆ ಜನರಲ್ಲಿ ಹೆಚ್ಚಿದಾಗ ಆ ಕೀರ್ತಿ ಕ್ಷಯಿಸುವುದರಿಂದ ಚಂದ್ರನೂ ಕ್ಷಯಿಸುತ್ತಾನೆ ಎಂದು ಹೇಳಿರುವುದರಿಂದ ಹೇತೂತ್ಪ್ರೇಕ್ಷೆ. ಕಾರಣವಲ್ಲದ್ದನ್ನು ಕಾರಣವೆಂದು ಸಚಮತ್ಕಾರವಾಗಿ ಊಹಿಸಿದರೆ ಹೇತೂತ್ಪ್ರೇಕ್ಷೆ.

## 13. ಅತಿಶಯೋಕ್ತ್ಯಲಂಕಾರ

ಸರ್ವೇ ಸಂತಃ ಸಭಕ್ತಿಪ್ರಣತಿನುತಿಪರಾಃ ಶ್ರೀಹರಿಂ ಚಿಂತಯಂತಿ
ಪ್ರೋಕ್ತಂ ತ್ಯೆಃ ಸದ್ಭಿರನ್ಯೇ ಶ್ರವಣಮನನಯೋರ್ಗೋಚರೀಕುರ್ವತೇಽದ್ಧಾ ।
ಏವಂ ಶ್ರೀಕೃಷ್ಣಪೂಜಾಂ ವಿರಚಯತಿ ಸತಿ ಶ್ರದ್ಧಯಾ ಕೃತ್ಸ್ನಲೋಕೇ
ನಾಸ್ತ್ಯುದ್ಯೋಗೋ ಮದೀಯಃ ಪರ ಇತಿ ಸತತಂ ವ್ಯಾಕುಲಃ ಪ್ರೇತರಾಜಃ ॥ 13

ಅನುವಾದ: 'ಎಲ್ಲ ಸಜ್ಜನರೂ ಭಕ್ತಿಯಿಂದ ಶ್ರೀಹರಿಯನ್ನು ನಮಸ್ಕರಿಸುತ್ತಾ, ಸ್ತುತಿಸುತ್ತಾ, ಧ್ಯಾನಿಸುತ್ತಿದ್ದಾರೆ. ಆ ಸಜ್ಜನರು ಹೇಳಿದುದನ್ನು ಬೇರೆಯವರು ಕೇಳಿ, ಮನನ ಮಾಡುತ್ತಿದ್ದಾರೆ. ಹೀಗೆ ಸಮಸ್ತಲೋಕವೂ ಶ್ರದ್ಧೆಯಿಂದ ಶ್ರೀಕೃಷ್ಣಪೂಜೆಯನ್ನು ಮಾಡುತ್ತಿರುವುದರಿಂದ ನನಗೆ ಯಾವ ಕೆಲಸವೂ ಇಲ್ಲವಾಗಿದೆ.' ಎಂದು ಯಮನು ಸದಾ ಚಿಂತಾಕ್ರಾಂತನಾಗಿದ್ದಾನೆ.

ವಿವರಣೆ: ಜಗತ್ತಿನಲ್ಲಿ ಎಲ್ಲರೂ ಕೃಷ್ಣನ ಭಕ್ತರಾಗಿ ಪೂಜಾನಿರತರಾಗಿರುವುದರಿಂದ ಅವರೆಲ್ಲ ನೇರವಾಗಿ ವೈಕುಂಠಕ್ಕೆ ಹೋಗುತ್ತಾರೆ. ಯಮನ ಕೈಗೆ ಸಿಕ್ಕುವವರು ಯಾರೂ ಇಲ್ಲ. ಹೀಗಾಗಿ ಅವನಿಗೆ ಕೆಲಸವೇ ಇಲ್ಲವಾಗಿ ವ್ಯಾಕುಲತೆ ಮೂಡಿದೆ ಎಂದು ಪದ್ಯದ ತಾತ್ಪರ್ಯ. ಶ್ರೀಕೃಷ್ಣಪೂಜೆಯು ಯಮಭಯವನ್ನು ನಿವಾರಿಸಿ ಮುಕ್ತಿಯನ್ನು ತರುತ್ತದೆ ಎಂಬುದು ಧ್ವನಿತಾರ್ಥ. ವಾಸ್ತವದಲ್ಲಿ ಯಮನಿಗೆ ಅಂಥ ವ್ಯಾಕುಲತೆ ಇಲ್ಲದಿದ್ದರೂ ಅದು ಇತ್ತು ಎಂದು ವರ್ಣಿಸಿರುವುದರಿಂದ ಸಂಬಂಧಾತಿಶಯೋಕ್ತಿ. ಸಂಬಂಧ ವಸ್ತುತ: ಇಲ್ಲದಿದ್ದರೂ ಯುಕ್ತಿಯಿಂದ ಅದು ಇದೆಯೆಂದು ವರ್ಣಿಸಿದರೆ ಸಂಬಂಧಾತಿಶಯೋಕ್ತಿ ಎಂಬ ಅಲಂಕಾರವಾಗುತ್ತದೆ. 'ಸಂಬಂಧಾತಿಶಯೋಕ್ತಿಃ ಸ್ಯಾದಯೋಗೇ ಯೋಗಕಲ್ಪನಮ್' ಎಂದು ಕುವಲಯಾನಂದದಲ್ಲಿ ಲಕ್ಷಣವನ್ನು ಹೇಳಿದ್ದಾರೆ.

ಇನ್ನೊಂದು ಉದಾಹರಣೆ –

ಕೃಷ್ಣ ತ್ವದ್ಯಶಸಾ ಸಮಸ್ತಭುವನಂ ಶ್ವೇತೀಕೃತಂ ಸರ್ವತಃ
ಸರ್ವೇ ಚಾದ್ಯ ಹಿಮಾಲಯಂತಿ ಕುಧರಾ ಹಂಸಂತಿ ಸರ್ವೇ ಖಗಾಃ ।
ಶಕ್ರೋ ನೈವ ಶಿವಃ ಸ್ವವಾಸಭವನಂ ವಿಜ್ಞಾತುಮೇವಂ ವಿಧಿ –
ರ್ಭ್ರಾಂತೋ ವಾಹನಮಾರ್ಗಣೇ ಸುರವಧೂಹಾಸ್ಯಾಸ್ಪದತ್ವಂ ಗತಃ ॥ 14